# ಒಲವೆಂದರೇನೋ ಬದುಕೆಂದರೇನೋ

**ಎಂ.ಎಸ್. ಆಶಾದೇವಿ**

ಎಚ್.ಎಸ್. ಮುಕ್ತಾಯಕ್ಕನವರ ಕವನ ಸಂಕಲನ 'ತನ್‌ಹಾಯಿ'ಯ ಗುಂಗಿನಲ್ಲಿ ಇರುವಾಗಲೇ ನಟರಾಜ್ ಹುಳಿಯಾರ್ ಅವರ 'ಕವಿಜೋಡಿಯ ಆತ್ಮಗೀತ' ಪ್ರಕಟವಾಗಿದೆ. ಒಲವೆಂದರೇನೋ ಬದುಕೆಂದರೇನೋ ಎನ್ನುವ ಆದಿಮ ಉದ್ಗಾರಕ್ಕೆ, ಕನಸು ಕನವರಿಕೆಗಳಿಗೆ, ಘನ ತಾತ್ವಿಕ ಶೋಧಗಳಿಗೆ, ಸಂಗೀತ, ರಂಗಭೂಮಿ, ಚಿತ್ರಕಲೆ, ಸಿನಿಮಾ... ಯಾವೆಲ್ಲ ಕಲಾಮಾಧ್ಯಮಗಳಲ್ಲಿ ನಡೆಸಿದ ಬಿಟ್ಟೂಬಿಡದ ಪ್ರಯತ್ನಗಳಿಗೆ, ಇಗೋ ಇದೇ ಇರಬೇಕಲ್ಲವೆ ನೀವು ಇಷ್ಟು ದಿನ ಹುಡುಕಿದ್ದು, ತಡಕಿದ್ದು, ಮಿಕ್ಕು ಮೀರಿ ಹೋಗುವುದರ ಬೆನ್ನು ಹತ್ತಿದ್ದು ಎನ್ನುವಂತೆ ಈ ಕಲಾಕೃತಿಯಿದೆ.

ಹೊಸ ಅನುಭವವು ಹೊಸ ಅಭಿವ್ಯಕ್ತಿಯ ದಾರಿಯನ್ನು ತಾನೇತಾನಾಗಿ ಸೃಷ್ಟಿಸಿಕೊಳ್ಳುತ್ತದೆ ಎನ್ನುವುದನ್ನು ಹೊಚ್ಚಹೊಸದಾಗಿ ಎಂಬಂತೆ ಕಾಣಿಸುವ ಪ್ರತಿ ಕಲಾಕೃತಿಯೂ ನಮ್ಮಲ್ಲಿ ಕಲೆಯ ಅಪೂರ್ವ ಶಕ್ತಿಯನ್ನು ಕುರಿತಂತೆ ಹುಟ್ಟಿಸುವ ಪ್ರೀತಿ ಮತ್ತು ಕೃತಜ್ಞತೆ ಅಪಾರವಾದುದು. ನಟರಾಜ್ ಅವರು 'ಕಥಾಕಾವ್ಯ' ಎನ್ನುವ ಹೆಸರಿನಲ್ಲಿ ಕಟ್ಟುವ ಈ ಕೃತಿಯೂ ಈ ಸಾಲಿಗೆ ಸೇರುತ್ತದೆ. ಕಥಾಕಾವ್ಯ ಎನ್ನುವ ಶೀರ್ಷಿಕೆಯ ಬಗ್ಗೆ ನಮ್ಮ ಅಭಿಪ್ರಾಯಗಳೇನೇ ಇರಲಿ, ಇದು ಕಲಾಭಿವ್ಯಕ್ತಿಯ ಮತ್ತೊಂದು ಬೆರಗು ಹುಟ್ಟಿಸುವ ಮಾಂತ್ರಿಕ ಸಾಧ್ಯತೆಯನ್ನು ಎತ್ತಿ ಹಿಡಿಯುವ ಕೃತಿ.

ಗಂಡು ಹೆಣ್ಣಿನ ಸಂಬಂಧದ ತುರಿಯಾವಸ್ಥೆಯನ್ನು ಅಷ್ಟೇ ಉತ್ಕಟವಾಗಿ ಹಿಡಿಯುವ ಕೃತಿ ಇದು. ಆದರೆ, ಈ ಅಂಶವೇ ಹಲವು ಸ್ಥಾಪಿತ ಸಂಸ್ಥೆಗಳ ಮೂಲವನ್ನು ಬುಡಮೇಲು ಮಾಡುವಷ್ಟು ಶಕ್ತವಾಗಿದೆ. ಮದುವೆ, ಕಾವ್ಯ, ಗಂಡಾಳಿಕೆ, ಮೌಲ್ಯವ್ಯವಸ್ಥೆಗಳ ಕಾರ್ಯಮಾದರಿಗಳು... ಈ ಎಲ್ಲವನ್ನೂ ಲೋಕಾತೀತವಾದ ಸಂಬಂಧವೊಂದು ಉಲ್ಲಂಘಿಸುವ ಈ ನಿರೂಪಣೆಯು ನಾಗರಿಕತೆಯ ಪೊಳ್ಳುತನ ಮತ್ತು ಶಕ್ತಿ ಎರಡನ್ನೂ ಧ್ವನಿಸುತ್ತದೆ. ಶಿವ ಶರ್ವಾಣಿಯರಂತೆ ಬದುಕನ್ನೇ ಆಪೋಶನ ತೆಗೆದುಕೊಳ್ಳುವ ಆವೇಗದ ಇಂಗ್ಲಿಷ್ ಕವಿಗಳಾದ ಟೆಡ್ ಹ್ಯೂಸ್ ಮತ್ತು ಸಿಲ್ವಿಯಾ ಅವರ ಸಂಬಂಧವು ಗಂಡು ಹೆಣ್ಣಿನ ಆದಿಮ ಸಂಬಂಧದ ಸ್ವರೂಪವನ್ನು ಚಿತ್ರಿಸುತ್ತದೆ. ಹದಿನಾಲ್ಕು ಲೋಕಕ್ಕೂ ಚಿಮ್ಮಲೀ ಸುಖಾ ಎನ್ನುವಂತೆ ಅಲೌಕಿಕವಾಗಿ ಆರಂಭವಾದ ಇವರಿಬ್ಬರ ಬದುಕು ಸುರಚಾಪದಂತೆ, ವಿದ್ಯುಲ್ಲತೆಯಂತೆ, ಮುರಿದು ಬೀಳುವ ಲಕ್ಷಾಂತರ ಮದುವೆಗಳಲ್ಲೊಂದು ಎಂಬಂತೆ ಮುರಿದು ಬೀಳುತ್ತದೆ. ಆದರೆ, ಅದೊಂದು ಚಾರಿತ್ರಿಕ, ರಮ್ಯ, ಕ್ರಾಂತಿಕಾರಿ ಸಂಬಂಧವಾಗಿ ಯಾವುದೇ ಗಂಡು ಹೆಣ್ಣು ಬದುಕಿದರೆ ಹೀಗೆ ಬದುಕಬೇಕು ಎಂದು ಮನವಾರೆ ನೆಚ್ಚುವಂತೆ ಬದುಕಿದ ಜೋಡಿಯ ಬದುಕು ಬರಹವನ್ನು ಹಲವು ಮೂಲಗಳಿಂದ ಪಡೆದ ಆಕರಗಳಿಂದ ಕಟ್ಟಿ, ಅದನ್ನು ಅಧಿಕೃತಗೊಳಿಸಿದ್ದಾರೆ. ಕಾವ್ಯಾತ್ಮಕವಾಗಿ ಕಾಣುತ್ತಾ, ಪ್ರಾಯೋಗಿಕವಾಗಿ ಅಸಾಧ್ಯ ಎನ್ನುವ ಭಾವವನ್ನು ಹುಟ್ಟಿಸಬಹುದಾದ ಜೀವಕೊರಳ ಸಂಬಂಧವನ್ನು, ಅದರ ಹುಟ್ಟು, ಏಳು ಬೀಳುಗಳಲ್ಲಿ,